# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **224** |
| ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | **16-07-2024** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಸಣ್ಣ ಕೈಗಾರಿಕೆ ವ್ಯಾಪ್ತಿಗೆ ಬರುವ ಉದ್ದಿಮೆಗಳು ಯಾವುವು; (ಮಾಹಿತಿ ನೀಡುವುದು) | ಭಾರತ ಸರ್ಕಾರವು ದಿನಾಂಕ 1.7.2020 ರಿಂದ ಜಾರಿಗೆ ತಂದಿರುವ ಹೊಸ ವ್ಯಾಖ್ಯಾನದ ಪ್ರಕಾರ ಯಂತ್ರೋಪಕರಣ ಮತ್ತು ಸ್ಥಾವರಗಳಲ್ಲಿ ಒಟ್ಟು ಬಂಡವಾಳ ರೂ.10 ಕೋಟಿ ಮೀರದಂತೆ ಹೂಡಿಕೆ ಮಾಡಿರುವ ಮತ್ತು ವಾರ್ಷಿಕ ವಹಿವಾಟು ರೂ.50 ಕೋಟಿ ಮೀರದಂತೆ ಇರುವ ಉತ್ಪಾದನಾ ಮತ್ತು ಸೇವಾ ಚಟುವಟಿಕೆಯ ವಲಯದ ಉದ್ಯಮಗಳನ್ನು ಸಣ್ಣ ಕೈಗಾರಿಕೆ ಎನ್ನುತ್ತಾರೆ.<br><br>ಕೈಗಾರಿಕಾ ಚಟುವಟಿಕೆಯನ್ನು ಉತ್ಪಾದನಾ ಮತ್ತು ಸೇವಾ ಚಟುವಟಿಕೆಗಳನ್ನಾಗಿ ವರ್ಗೀಕರಿಸಲಾಗಿದ್ದು ಉತ್ಪಾದನಾ ವಲಯದ ಕೈಗಾರಿಕಾ ಚಟುವಟಿಕೆಗಳನ್ನು ಪ್ರಮುಖವಾಗಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.<br><br>1. ಕೃಷಿ ಮತ್ತು ಆಹಾರ ಸಂಸ್ಕರಣಾ ಕೈಗಾರಿಕೆಗಳು<br>2. ಜವಳಿ ಮತ್ತು ಸಿದ್ದ ಉಡುಪು ಕೈಗಾರಿಕೆಗಳು<br>3. ಇಂಜಿನಿಯರಿಂಗ್ ಕೈಗಾರಿಕೆಗಳು<br>4. ಆಟೋಮೊಬೈಲ್ ಕೈಗಾರಿಕೆಗಳು<br>5. ರಾಸಾಯನಿಕ ಕೈಗಾರಿಕೆಗಳು<br>6. ಔಷಧ ಮತ್ತು ಜೈವಿಕ ತಂತ್ರಜ್ಞಾನ ಕೈಗಾರಿಕೆಗಳು<br>7. ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು<br>8. ಪ್ಲಾಸ್ಟಿಕ್ ಆಧಾರಿಕ ಕೈಗಾರಿಕೆಗಳು<br>9. ಕರಕುಶಲ ಉತ್ಪನ್ನ ಕೈಗಾರಿಕೆಗಳು<br>10. ಸ್ಟೀಲ್ ಮತ್ತು ಐರನ್ ಕೈಗಾರಿಕೆಗಳು<br>11. ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ಕೈಗಾರಿಕೆಗಳು |
| (ಆ) | ಸಣ್ಣ ಕೈಗಾರಿಕೆ ಅಧೀನಕ್ಕೆ ಬರುವ ಸಾರ್ವಜನಿಕ ನಿಗಮ/ಕಂಪನಿಗಳು, ಉದ್ದಿಮೆಗಳು, ಸೊಸೈಟಿಗಳು ಹಾಗೂ ಇತರೆ ಅಂಗ ಸಂಸ್ಥೆಗಳು ಯಾವುವು? (ಮಾನದಂಡಗಳೊಂದಿಗೆ ಮಾಹಿತಿ ನೀಡುವುದು) | ಸಣ್ಣ ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು / ಕಂಪನಿಗಳು ಶಾಸನಬದ್ಧ ಮಂಡಳಿಗಳು, ಉದ್ಯಮಗಳು, ಸೊಸೈಟಿಗಳು, ಹಾಗೂ ಇತರ ಅಂಗ ಸಂಸ್ಥೆಗಳ ವಿವರಗಳು ಈ ಕೆಳಗಿನಂತಿವೆ:<br><br>1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು<br>2. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು<br>3. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು<br>4. ಕರ್ನಾಟಕ ರಾಜ್ಯ ತಾಂತ್ರಿಕ ಉನ್ನತೀಕರಣ ಪರಿಷತ್, ಬೆಂಗಳೂರು<br>5. ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ, ಬೆಂಗಳೂರು<br>6. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಬೆಂಗಳೂರು |

7. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರಿ ಮಹಾಮಂಡಳಿ, ಬೆಂಗಳೂರು

ಈ ನಿಗಮ, ಮಂಡಳಿ ಮತ್ತು ಸಂಸ್ಥೆಗಳ ಪ್ರಮುಖ ಧ್ಯೇಯೋದ್ದೇಶಗಳು / ಮಾನದಂಡಗಳು ಈ ಕೆಳಗಿನಂತಿವೆ.

1. **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು**
   ಸದರಿ ನಿಗಮವು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಅಗತ್ಯವಿರುವ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಹಂಚಿಕೆ ಮಾಡುತ್ತದೆ.

2. **ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು**
   ಸದರಿ ನಿಗಮವು ಕುಶಲಕರ್ಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ಅವಶ್ಯವಾದ ಕಚ್ಚಾಮಾಲನ್ನು ಅವರಿಗೆ ಪೂರೈಸಿ, ಸಿದ್ಧಪಡಿಸಿದ ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ. ಈ ಎಲ್ಲಾ ಕುಶಲಕರ್ಮಿಗಳ ಘಟಕಗಳು ಸೂಕ್ಷ್ಮ ಕೈಗಾರಿಕೆಗಳು ಎಂದು ಗುರುತಿಸಲ್ಪಡುತ್ತಾರೆ

3. **ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು**
   ಸದರಿ ಮಂಡಳಿಯು ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳ ಅಭಿವೃದ್ಧಿ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು ಸೂಕ್ಷ್ಮ ಕೈಗಾರಿಕೆಗಳಾಗಿರುತ್ತವೆ.

4. **ಕರ್ನಾಟಕ ರಾಜ್ಯ ತಾಂತ್ರಿಕ ಉನ್ನತೀಕರಣ ಪರಿಷತ್, ಬೆಂಗಳೂರು**
   ಸದರಿ ಪರಿಷತ್ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಂಬಂಧಿಸಿದ ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಸುಧಾರಣೆ, ಇತ್ಯಾಧಿಯಂಥಹ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ.

5. **ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ, ಬೆಂಗಳೂರು**
   ಸದರಿ ಸಂಸ್ಥೆಯು ಸಣ್ಣ ಚರ್ಮ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅಲ್ಲಿ ಕಾರ್ಯನಿರ್ವಹಿಸಲು ಅಗತ್ಯವಿರುವ ಮಾನವ ಸಂಪನ್ಮೂಲವನ್ನು ತರಬೇತಿ ಮೂಲಕ ಅಭಿವೃದ್ಧಿ ಪಡಿಸುತ್ತದೆ.

6. **ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಬೆಂಗಳೂರು**
   ಸದರಿ ನಿಗಮವು ತೆಂಗಿನ ನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕುರಿತು ಕಾರ್ಯನಿರ್ವಹಿಸುತ್ತದೆ.

| | | |
|---|---|---|
| | | 7. **ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರಿ ಮಹಾಮಂಡಳಿ, ಬೆಂಗಳೂರು**<br>ಸದರಿ ಮಹಾಮಂಡಳಿಯು ತೆಂಗಿನ ನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕುರಿತು ಕಾರ್ಯನಿರ್ವಹಿಸುತ್ತದೆ. |

**ಸಿಐ 81 ಎಸ್‌ಎಸ್‌ಐ 2024**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು